ನಡೆಯಬಹುದು, ನಾಳೆಯೂ ನಡೆಯಬಹುದು. ಜೊತೆಗೆ, ಈಗಾಗಲೇ ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಬಾಂಬ್‌ಗೋಸ್ಕರ ಎಲ್ಲಾಕಡೆ ತಪಾಸಣೆ ಮಾಡಲಾಗುತ್ತಿದೆ, ವಾಹನಗಳನ್ನು ತಪಾಸಣೆ ನಡೆಸಲಾಗುತ್ತಿದೆ. ಅದೇ ರೀತಿ ವಾಹನಗಳನ್ನು ತೆಗೆದುಕೊಂಡು ಹೋಗಿ ಒಂದು ಕಡೆ ಬಾಂಬ್ ಬ್ಲಾಸ್ಟ್ ಸಿಕೆ ಮಾಡಿರಬಾರದು? ಆದುದರಿಂದ, ಜನರಿಗೆ ಸಮಾಧಾನ ಹಾಗೂ ಶಾಂತಿ ತರುವ ಜವಾಬ್ದಾರಿ ಕೆಲಸವನ್ನು ತತ್‌ಕ್ಷಣದಿಂದ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

(3) ರೇವಜೀತು ಪ್ರಕರಣದ ಬಗ್ಗೆ ಸುಪ್ರೀಂಕೋರ್ಟಿನ ತೀರ್ಮಾನ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :- ಮಾನ್ಯ ಅಧ್ಯಕ್ಷರೇ ರಾಷ್ಟ್ರದ ಸುಪ್ರೀಂ ಕೋರ್ಟ್ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದ ರೇವಜಿತು ಡೀಲ್ ಆರ್ಡರ್ಸ್ ಅನ್ನು ಕ್ವಾಷ್ ಮಾಡಿದೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಮುಖ್ಯವಾದ ವಿಷಯವಾಗಿದೆ. ಆದರ ವಿಷಯವಾಗಿ ನಾನು ತಮ್ಮ ಮುಂದೆ ಪ್ರಸ್ತಾಪಿಸುವುದಕ್ಕೆ ಇಚ್ಛಿಪಡುತ್ತೇನೆ. ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ....

ಶ್ರೀ ಆರ್.ವಿ. ದೇಶಪಾಂಡೆ :- ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಯಾವ ನಿಯಮದ ಕೆಳಗೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ? ಯಾವುದರ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆಂಬುದು ಗೊತ್ತಾಗಬೇಕು. ಒಂದು ವೇಳೆ ಸದನದ ಸದಸ್ಯರ ಬಗ್ಗೆ ಪ್ರಸ್ತಾಪ ಮಾಡುವಪರಿದ್ದರೆ ತಮಗೆ ಮುಂಚಿತವಾಗಿ ನೋಟೀಸ್ ಕೊಡಬೇಕು. ನೋಟೀಸ್ ಕೊಟ್ಟ ನಂತರ ಪ್ರಸ್ತಾಪ ಮಾಡುವ ಅಧಿಕಾರ ಅವರಿಗೆ ಇದೆ. ಆದರೆ, ಅವರು ನೋಟೀಸ್ ಕೊಡದೆ ಸದನದ ಸದಸ್ಯರ ಬಗ್ಗೆ ಪ್ರಸ್ತಾಪಿಸಿದರೆ, ಮಾನ್ಯ ಅಧ್ಯಕ್ಷರು ಅದನ್ನು ಅಲೋ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ :- ಸನ್ಮಾನ್ಯ ಅಧ್ಯಕ್ಷರೇ, ನಾನು ಯಾವ ಸದಸ್ಯರ ವಿಷಯವಾಗಿಯೂ ಪ್ರಸ್ತಾಪ ಮಾಡಲಿಲ್ಲ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಹಿಂದೆ ಏನು ಕೆಲವು ತೀರ್ಮಾನಗಳನ್ನು ಮಾಡಿತ್ತು. ಆ ತೀರ್ಮಾನಗಳನ್ನು ಸುಪ್ರೀಂ ಕೋರ್ಟ್ ಕ್ವಾಷ್ ಮಾಡಿದೆ. ಆ ರೀತಿ ಕ್ವಾಷ್ ಮಾಡಿದ ಕಾರಣ ಆಗುವಂಥ ಪರಿಣಾಮಗಳೇನು ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ನಾನು ತಮ್ಮ ಮುಂದೆ ನಿಂತಿದ್ದೇನೆ. ಈ ವಿಷಯವಾಗಿ ನಾನು ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕೆಂದಿದ್ದೆ. ಸುಪ್ರೀಂ ಕೋರ್ಟ್ ತೀರ್ಪು ಏನಿದೆ, ಅದರ ಹಿಂದೆ ಆಗಿರುವ ಒಂದು ವಿವಾದದ ವಿಷಯವಾಗಿ ನಮ್ಮ ರಾಜ್ಯ ಸರ್ಕಾರದ ವಿಷಯದಲ್ಲಿ ತೊಂದರೆಯಾಗುತ್ತಿದೆ, ಜನತೆಗೂ ನಷ್ಟವಾಗುತ್ತಿದೆ, ನಮ್ಮ ಸರ್ಕಾರಕ್ಕೆ ಆಗಿರುವ ನಷ್ಟವನ್ನು ತಾವು ಸರಿಪಡಿಸಿಕೊಡಬೇಕಾಗಿದೆ ...

ಅಧ್ಯಕ್ಷರು :- ಇದರ ಬಗ್ಗೆ ಪ್ರಸ್ತಾಪಿಸಲು ಅವಕಾಶವಿಲ್ಲ. ಈಗ ಸದನದ ಕಾರ್ಯಕಲಾಪವನ್ನು ಮುಂದೂಡಿ ಮತ್ತೆ ಮಧ್ಯಾಹ್ನ 2-15 ಗಂಟೆಗೆ ಸೇರುವುದು.

(ಸದನವು 1 ಗಂಟೆ 15 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಮಧ್ಯಾಹ್ನ 2 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಸದನವು ಪುನಃ 2-40ಕ್ಕೆ ಸಮಾವೇಶಗೊಂಡಿತು.